ಅ.ದಾ. 40/2023     ಪಿಡಬ್ಲ್ಯೂ-1

ದಿನಾಂಕಃ 02.05.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ರಿಂದ 4 ನೇ ಪ್ರತಿವಾದಿ ಪರ ಶ್ರೀ ಎನ್.ಡಿ.ಕೆ ವಕೀಲರಿಂದ:**

ಪ್ರಸ್ತುತ ದಾವೆಯನ್ನು ಪ್ರತಿವಾದಿಯ ವಿರುದ್ಧ ನಿರ್ಬಂಧಕಾಜ್ಞೆಯನ್ನು ಕೋರಿ ದಾಖಲಿಸಿರುತ್ತೇನೆ. ಸ.ನಂ.40 ರಲ್ಲಿ ಎಷ್ಟು ಜಮೀನಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸ.ನಂ.111 ರಲ್ಲಿ ವಾದಿಗೆ 19 ಗುಂಟೆ ಜಮೀನಿರುತ್ತದೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಗೆ ಕೂಡಳ್ಳಿ ಗ್ರಾಮದಲ್ಲಿ 24 ಗುಂಟೆ ಜಮೀನಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ 4 ನೇ ಪ್ರತಿವಾದಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 4 ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಯವರು ತಂದೆಗೆ ಮಂಜೂರದ ಸ್ವತ್ತು ಎಂದರೆ ಸರಿ. ಸದರಿ ಮಂಜೂರಾತಿಯನ್ನು ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಮಾಡಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ಸದರಿ ಸ್ವತ್ತಿನ ಮಂಜೂರಾತಿ ಸಂಖ್ಯೆ ಕೆಎಪ್67/1956-57 ಎಂದರೆ ನನಗೆ ತಿಳಿದಿರುವುದಿಲ್ಲ. ಸದರಿ ಸ್ವತ್ತಿನ ಸಾಗುವಳಿ ಚೀಟಿ ಸಂಖ್ಯೆ 151/1958-59 ಎಂದರೆ ಸರಿ. ಸದರಿ ಸಾಗುವಳಿ ಚೀಟಿಯನ್ನು 1 ನೇ ಪ್ರತಿವಾದಿಯವರ ತಂದೆಗೆ ನೀಡಲಾಗಿರುತ್ತದೆ ಎಂದರೆ ನನಗೆ ತಿಳಿದಿರುವುದಿಲ್ಲ. 4 ನೇ ಪ್ರತಿವಾದಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರುತ್ತಾರೆ ಎಂದರೆ ಸರಿ. ಸದರಿ ಮಂಜೂರಾತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರಿಗೆ ಆಗಿರುವುದರಿಂದ ಸದರಿ ಮಂಜೂರಾತಿಯು PTCL ಕಾಯ್ದೆಯಡಿ ಅನ್ವಯವಾಗುತ್ತದೆ ಎಂದರೆ ಸರಿ. ಆದ ಕಾರಣ ನಿಮಗೆ ಸದರಿ ಸ್ವತ್ತನ್ನು ಕೊಂಡುಕೊಳ್ಳುವ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.